ಅಧ್ಯಕ್ಷರು: ನಿಮ್ಮ ಪ್ರಶ್ನೆಗಳಿಗೆಲ್ಲಾ ಉತ್ತರ ಕೊಟ್ಟಿದ್ದೇನೆ. ಹಾಗಾಗಿ ಮತ್ತೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ವೆಂಕಟರಮಣಪ್ಪ: ನಿಮಗೆ ಕರೆದು ಮಾತನಾಡತಕ್ಕಂತಹ ಸಂಪ್ರದಾಯವೇ ಇಲ್ಲವಲ್ಲ.

ಅಧ್ಯಕ್ಷರು: ಈಗ ಗಮನ ಸೆಳೆಯುವ ಸೂಚನೆಗಳು.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ನಾನು ಒಂದು ಮಹತ್ವದ ನಿರ್ಣಯವನ್ನು ಸಭೆಯ ಮುಂದೆ ಮಂಡಿಸುತ್ತೇನೆ. ತಾವು ದಯಮಾಡಿ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ಮಂಡಿಸಿ

6. ನಿರ್ಣಯ

ವಿಷಯ: ಜೂನ್ 4–5ರ ಮಧ್ಯರಾತ್ರಿ ಬಾಬಾ ರಾಮ್‌ದೇವ್‌ವರ ಮೇಲೆ ನಡೆದಂತಹ ದಾಳಿ ಕುರಿತು.

ಶ್ರೀ ಬಿ.ಎನ್.ಬಚ್ಚೇಗೌಡ(ಕಾರ್ಮಿಕ ಮತ್ತು ರೇಷ್ಮೆ ಸಚಿವರು):– ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ನಿರ್ಣಯವನ್ನು ತಮ್ಮ ಅನುಮತಿ ಕೋರಿ ಸಭೆಯ ಮುಂದೆ ಮಂಡಿಸುತ್ತೇನೆ.

"ದೇಶದ ಮಹಾನ್ ಪಿಡುಗಾಗಿರುವ ಭ್ರಷ್ಟಾಚಾರದ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸುತ್ತಿದ್ದ ಬಾಬಾ ರಾಮ್‌ದೇವ್‌ರನ್ನು ಜೂನ್ 4–5 ರ ಮಧ್ಯರಾತ್ರಿಯಲ್ಲಿ ನಡೆಸಿದ ಪೊಲೀಸ್ ಕಾರ್ಯಾಚರಣೆಯ ಮೂಲಕ ಬಂಧಿಸಿರುವುದು ಹೇಯಕೃತ್ಯ. ಈ ಬಂಧನ ಒಬ್ಬ ಹೋರಾಟಗಾರನಿಗೆ ಮಾಡಿದ ಅಪಚಾರ ಮಾತ್ರವಲ್ಲ, ಬದಲಿಗೆ ಭ್ರಷ್ಟಾಚಾರದ ವಿರುದ್ಧ ಧ್ವನಿಯೆತ್ತಿರುವ ಹಾಗೂ ತನ್ಮೂಲಕ ದೇಶದ ವ್ಯವಸ್ಥೆಗೆ ಒಂದು ಹೊಸ ಆರೋಗ್ಯಕರ ದಿಕ್ಕು ತೋರಿಸುವ ನಿಟ್ಟಿನಲ್ಲಿ ಸಿಡಿದೆದ್ದಿರುವ ಪ್ರಜಾಶಕ್ತಿಯ ಮೇಲೆ ಮಾಡಿರುವ ಒಂದು ಆಕ್ರಮಣ.

ಬ್ರಿಟಿಷರ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಹೋರಾಟ ಮಾಡಿ ಸ್ವಾತಂತ್ರ್ಯ ತಂದುಕೊಂಡ ಈ ದೇಶದಲ್ಲಿ ಅಹಿಂಸಾ ಹೋರಾಟವನ್ನು ಮಧ್ಯರಾತ್ರಿಯಲ್ಲಿ ದಮನಗೊಳಿಸಿರುವ ಸನ್ನಿವೇಶ ಬಂದೊದಗಿರುವುದು ಅತ್ಯಂತ ವಿಪರ್ಯಾಸ. ಈ ಸನ್ನಿವೇಶವು ನಾಗರೀಕ ಮೂಲ ಹಕ್ಕುಗಳನ್ನು ಅಪಹರಿಸಿದ ತುರ್ತು ಪರಿಸ್ಥಿತಿಯ ಸಂದರ್ಭವನ್ನು ನೆನಪಿಗೆ ತರುತ್ತದೆ.

ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಪೊಲೀಸ್ ದೌರ್ಜನ್ಯದ ಮೂಲಕ ಹತ್ತಿಕ್ಕುವ ಈ ಪ್ರಯತ್ನದಲ್ಲಿ ಅಸಂಖ್ಯ ಮಹಿಳೆಯರ ಮತ್ತು ಮಕ್ಕಳು ಘಾಸಿಗೊಂಡಿದ್ದಾರೆ. ನಿರಪರಾಧಿ ಮುಗ್ಧ ಜನಗಳ ಮೇಲಾದ ಈ ಪೊಲೀಸ್ ಹಲ್ಲೆಯನ್ನು ಸಹ ಈ ಸದನ ತೀವ್ರವಾಗಿ ಖಂಡಿಸುತ್ತದೆ. ಕಪ್ಪು ಹಣದ ಮಾರಕ ಶಕ್ತಿಯ ವಿರುದ್ಧ ಧ್ವನಿಯೆತ್ತಿರುವ ಪ್ರಜಾಶಕ್ತಿಯ ಮುಖವಾಣಿಯಾದ ಬಾಬಾ ರಾಮ್‌ದೇವ್‌ರವರ ವಿರುದ್ಧದ ಪೋಲಿಸ್ ಕಾರ್ಯಾಚರಣೆಯನ್ನು ಈ ಸದನವು ತೀವ್ರವಾಗಿ ಖಂಡಿಸುತ್ತದೆ ಹಾಗೂ ಈ ಕುರಿತು ಉನ್ನತ ಮಟ್ಟದ ತನಿಖೆ ಆಗಬೇಕೆಂದು ಆಗ್ರಹಿಸುತ್ತದೆ."

ಶ್ರೀ ಬಾಬಾ ರಾಮ್‌ದೇವ್‌ರವರ ಬಂಧನದಿಂದ ಈ ದೇಶದ ಜನತೆಯ ಮತ್ತು ಈ ರಾಜ್ಯದ ಜನತೆಯ ಭಾವನೆಗೆ ಧಕ್ಕೆ ಬಂದಿದೆ. ಇಡೀ ನಾಡಿನ ಜನತೆಯ ಭಾವನೆ ಬಿಂಬಿಸಿ ಇರುವ ನಿರ್ಣಯ ಇದು. ಬಾಬಾ ರಾಮ್‌ದೇವ್‌ರವರು ಪ್ರಸ್ತಾಪಿಸಿರುವ ವಿಷಯಗಳಾದ ಭ್ರಷ್ಟಾಚಾರ ಬಹಳ ಅತ್ಯಾವಶ್ಯಕವಾದ ವಿಷಯ. ವಿದೇಶದಲ್ಲಿರತಕ್ಕಂತಹ ಕಪ್ಪು ಹಣ ಮತ್ತು ಭ್ರಷ್ಟಾಚಾರದಲ್ಲಿ ತೊಡಗಿರತಕ್ಕಂತಹವರಿಗೆ ಉಗ್ರ ಶಿಕ್ಷೆ. ಈ ರೀತಿ ಅನೇಕ ವಿಷಯಗಳ ಬಗ್ಗೆ ಅವರ ಪ್ರಸ್ತಾಪ ಅದನ್ನು ನಾವೆಲ್ಲರೂ ಗಂಭೀರವಾಗಿ ತೆಗೆದುಕೊಳ್ಳಬೇಕಾದ ವಿಷಯ. ಈ ರೀತಿ ನ್ಯಾಯಯುತವಾದ ಧ್ವನಿಯನ್ನು ಹೊಸಕಿ ಹಾಕುವ ಪ್ರವೃತ್ತಿ ಅಪಾಯಕಾರಿ. ನಮ್ಮ ಈ ಸದನ ನಾಡಿನ ಜನತೆಯ ಭಾವನೆಯ ಒಂದು ಆತ್ಮಸಾಕ್ಷಿಯಾಗಿ ಕೆಲಸ ಮಾಡಬೇಕು. ಈ ನಿರ್ಣಯವನ್ನು ಸದನ ಒಪ್ಪಿಕೊಂಡು ಸಂಬಂಧಪಟ್ಟವರಿಗೆ ತಲುಪಿಸುವ ಕಾರ್ಯ ಆಗಬೇಕೆಂದು ತಮ್ಮ ಮೂಲಕ ಕೋರುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಅಧ್ಯಕ್ಷರೆ, 4.6.2011 ಈ ದಿನ ದೇಶಕ್ಕೆ ಒಂದು ರೀತಿಯ ಕರಾಳ ದಿನ. ಆ ರಾತ್ರಿ ದೇಶಕ್ಕೆ ಒಂದು ರೀತಿ ಕರಾಳ ರಾತ್ರಿ. ಆವತ್ತು ನಾನು ನಮ್ಮ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಗೋಸ್ಕರ ಲಕ್ನೋದಲ್ಲಿದ್ದೆ. ರಾತ್ರಿ ಮೂರುವರೆ ಗಂಟೆಯವರೆಗೂ ಕೂಡ ಎಲ್ಲಾ ಟಿ.ವಿ. ಚಾನಲ್‌ಗಳಲ್ಲಿ ತೋರಿಸುತ್ತಿದ್ದ ರಾಮ ಲೀಲಾ ಮೈದಾನದಲ್ಲಿ ಏನು ನಡೆಯಿತು ಎನ್ನುವುದನ್ನು ಕಣ್ಣಿನಿಂದ ನೋಡಿ ಆಶ್ಚರ್ಯವಾಯಿತು. ಶಾಂತಿಯುತವಾಗಿ ನಡೆಯುತ್ತಿದ್ದ ಧರಣಿ. ಇಡೀ ದೇಶ ಪ್ರಪಂಚದಲ್ಲಿಯೇ ಗೌರವ ಪಡೆದಿರುವಂತಹ ಒಬ್ಬ ಸಾಧು, ಬಾಬಾರಾಮ್‌ದೇವ್‌ರವರು ಇಡೀ ದೇಶದ ಜನರ ಧ್ವನಿಯಾಗಿ ಧರಣಿ ಕುಳಿತಿದ್ದರು. ಸಾವಿರಾರು ಜನ ಅವರ ಜೊತೆಗಿದ್ದರು. ಮಹಿಳೆಯರು ಮಕ್ಕಳು ಮತ್ತು ನಾಗರೀಕರೆಲ್ಲಾ ಕುಳಿತಂತಹ ಒಂದು ಧರಣಿಗೆ ರಾತ್ರಿ ಇದ್ದಕ್ಕಿದ್ದ ಹಾಗೆ ಸಾವಿರಾರು ಜನ ಪೊಲೀಸ್‌ನವರು

ಮುತ್ತಿಕೊಂಡರು. ಎಲ್ಲಾ ದಿಕ್ಕಿನಿಂದ ಕೂಡ ಪೊಲೀಸ್‌ನವರು ಮುತ್ತಿಕೊಂಡರು. ಅವರು ನಿಜಕ್ಕೂ ಕೂಡ ನಾವು ಸ್ವತಂತ್ರ ಭಾರತದಲ್ಲಿ ಇದ್ದೇವೆಯೇ ಎನ್ನುವಂಥ ಅನುಮಾನ ಬರುವ ರೀತಿಯಲ್ಲಿ ನಡೆದುಕೊಂಡರು. ಲಾಠಿ ಛಾರ್ಜ್, ಟಿಯರ್ ಗ್ಯಾಸ್, ಹೆಣ್ಣು ಮಕ್ಕಳ ಮೇಲೆ ಅಕ್ರಮಣ ನಡೆಯಿತು. ರಾಮ್‌ಲೀಲಾ ಮೈದಾನ ಒಂದು ರೀತಿಯಲ್ಲಿ ಮಹಾಭಾರತ ನಡೆಯುತ್ತಿರುವಂಥ ಮೈದಾನವಾಗಿತ್ತು. ಯಾವ ರೀತಿ ದುಶ್ಯಾಸನ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಡೆಸಿದನೋ ಆ ರೀತಿಯಲ್ಲಿ ಅಲ್ಲಿ ಹೆಣ್ಣು ಮಕ್ಕಳ ಬಟ್ಟೆ ಕಿತ್ತು ಹಾಕಿದರು. ಏನು ಗೊತ್ತಿಲ್ಲದ ಅಮಾಯಕರ ಮೇಲೆ ಅವರು ಹೊಡೆದಂಥ ಲಾಠಿ ಛಾರ್ಜ್‌ನಿಂದಾಗಿ ಎಷ್ಟೋ ಜನರು ಆಸ್ಪತ್ರೆಯನ್ನು ಸೇರಬೇಕಾಗಿ ಬಂತು. ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ಜಲಿಯನ್ ವಾಲಾಬಾಗ್‌ನ ದೃಶ್ಯಗಳನ್ನು ನಾವು ಟಿ.ವಿ.ಯಲ್ಲಿ ನೋಡಿದ್ದೇವೆ, ಪತ್ರಿಕೆಗಳಲ್ಲಿ ಈ ಬಗ್ಗೆ ಓದಿ ತಿಳಿದುಕೊಂಡಿದ್ದೇವೆ. ರಾಮ್‌ಲೀಲಾ ಮೈದಾನದಲ್ಲಿ ಬಂದ ಪೊಲೀಸ್‌ನವರಿಗೆ ಹೇಳುವವರು ಕೇಳುವವರು ಯಾರೂ ಇರಲಿಲ್ಲ. ಅವರಿಂದ ಸರ್ವಾಧಿಕಾರಿ ಧೋರಣೆ ಅಲ್ಲಿ ನಡೆಯುತ್ತಿತ್ತು. ಅಲ್ಲಿ ಟಿ.ವಿ.ಚಾನಲ್‌ನವನೊಬ್ಬ ಸುಮಾರು 30 ರಿಂದ 33 ವರ್ಷದೊಳಗಿನ ಸಾಮಾನ್ಯ ಮಹಿಳೆಯೊಬ್ಬರನ್ನು ಸಂಪರ್ಕಿಸಿ ಯಾವ ಕಾರಣಕ್ಕಾಗಿ ಈ ಹೋರಾಟದಲ್ಲಿ ಭಾಗವಹಿಸಲು ಬಂದಿದ್ದೀರಿ ಎಂದು ಕೇಳುತ್ತಾನೆ. ಅದಕ್ಕೆ ಆ ಮಹಿಳೆ ಉತ್ತರಿಸುತ್ತಾ, ನನ್ನ ಯಜಮಾನರು ಸೈನಿಕರಾಗಿದ್ದರು, ಅವರು ಈಗ ತೀರಿಹೋಗಿದ್ದಾರೆ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎನ್ನುವ ನಿಟ್ಟಿನಲ್ಲಿ ಬಾಬಾ ರಾಮ್‌ದೇವ್ ನಡೆಸುತ್ತಿರುವ ಈ ಹೋರಾಟದಲ್ಲಿ ರಾಷ್ಟ್ರ ಪ್ರೇಮಕ್ಕೋಸ್ಕರ ಈ ಒಂದು ಹೋರಾಟದಲ್ಲಿ ನಾನು ಧುಮುಕಿದ್ದೇನೆಂದು ಆ ತಾಯಿ ಹೇಳುತ್ತಾಳೆ. ಇಂಥ ದೇಶದಲ್ಲಿ ಸರ್ವಾಧಿಕಾರಿ ವ್ಯವಸ್ಥೆ ಅಲ್ಲಿ ನಡೆಯಿತು. ಬಾಬಾ ರಾಮ್‌ದೇವ್‌ರವರ ನೇತೃತ್ವದಲ್ಲಿ ನಡೆಯುತ್ತಿರುವಂಥ ಈ ಒಂದು ಹೋರಾಟದ ಬೇಡಿಕೆಗಳಾದರೂ ಏನು? ರಾಷ್ಟ್ರಕ್ಕೆ ಮಾರಕವಲ್ಲದ ರಾಷ್ಟ್ರಕ್ಕೆ ಸಾಧಕವಾಗಿರುವ ಬೇಡಿಕೆಗಳು. ನಮ್ಮ ದೇಶದ ಹಣವನ್ನು ವಿದೇಶದಲ್ಲಿ ಇಟ್ಟಿದ್ದಾರೆ. ಆ ಹಣವನ್ನು ತೆಗೆದುಕೊಂಡು ಬನ್ನಿ, ಈ ದೇಶದ ಉದ್ಧಾರಕ್ಕೆ ಅನುಕೂಲವಾಗುತ್ತದೆ. ಯಾರ್ಯಾರು ಕಪ್ಪು ಹಣವನ್ನು ಅಲ್ಲಿ ಇಟ್ಟಿದ್ದಾರೋ ಅವರ ಪಟ್ಟಿಯನ್ನು ಬಿಡುಗಡೆ ಮಾಡಿ ಮತ್ತು ಆ ಕಪ್ಪು ಹಣವನ್ನು ರಾಷ್ಟ್ರೀಯ ಸಂಪತ್ತು ಎಂದು ಘೋಷಣೆ ಮಾಡಿ. ಕಪ್ಪು ಹಣವನ್ನು ಇಟ್ಟವರನ್ನು ರಾಷ್ಟ್ರ ದ್ರೋಹಿಗಳು ಎಂದು ತೀರ್ಮಾನ ಮಾಡಿ ಅವರಿಗೆ ಶಿಕ್ಷೆ ಕೊಡಿ. ಈ ಬೇಡಿಕೆಗಳನ್ನು ಸ್ವತಂತ್ರ ಭಾರತದ ಪ್ರತಿಯೊಬ್ಬ ಪ್ರಜೆಯೂ ಮೆಚ್ಚತಕ್ಕಂಥದ್ದೇ ಆಗಿವೆ. ಆದರೆ ಅಲ್ಲಿ ನಡೆದದ್ದೇನು? ಯಾರೋ ರಾಷ್ಟ್ರ ದ್ರೋಹಿಯನ್ನು

ನಡೆಸಿಕೊಳ್ಳುವ ರೀತಿಯಲ್ಲಿ ಬಾಬಾ ರಾಮ್‌ದೇವ್‌ರವರನ್ನು ನಡೆಸಿಕೊಂಡರು. ಮಂತ್ರಿಗಳು ಹೇಳಿಕೆಗಳನ್ನು ಕೊಡುತ್ತಾರೆ. ರಾಮ್‌ದೇವ್ ಬಗ್ಗೆ ಅವರು ಬಳಸಿರುವಂಥ ಪದಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಆ ರೀತಿಯ ಪದಗಳನ್ನು ರಾಮ್‌ದೇವ್‌ರವರ ಬಗ್ಗೆ ಬಳಸಿದ್ದಾರೆ. ಆ ಮಂತ್ರಿಗಳು ಹೇಳಿದಂಥ ಒಂದು ಪದ ನನಗೆ ನೆನಪಾಗುತ್ತಿದೆ. ಆ ಎಲ್ಲಾ ಮಂತ್ರಿಗಳು ಕೂಡ ತಮಗೆ ಗೊತ್ತಿದೆ. ಒಸಾಮ ಬಿನ್ ಲಾಡೆನ್‌ನಂತಹವನನ್ನು ಬಹಳ ಗೌರವ ಕೊಟ್ಟು ಲಾಡೆನ್ ಜೀ ಎಂದು ಕರೆಯುತ್ತಾರೆ. ಆದರೆ ರಾಮ್‌ದೇವ್‌ರವರನ್ನು ದರೋಡೆಕೋರ ಎಂದು ಕರೆಯುತ್ತಾರೆ, ನಾವು ಇಂದು ಯಾವ ದೇಶದಲ್ಲಿದ್ದೇವೆನ್ನುವ ಅನುಮಾನ ಬರುತ್ತಿದೆ. ಇವತ್ತು ಇಡೀ ದೇಶದ ಜನರು ರಾಮ್‌ದೇವ್‌ರವರ ಜೊತೆ ನಿಂತಿದ್ದಾರೆ. ಅವರ ಜೊತೆ ನಿಂತಿರುವಂಥ ಮಹಾನ್ ವ್ಯಕ್ತಿಗಳ ನೆನಪಾಗುತ್ತದೆ. ಅಣ್ಣಾ ಹಜಾರೆ, ಸಂತೋಷ್ ಹೆಗ್ಡೆಯವರು, ಶಾಂತಿ ಭೂಷಣ್‌ರವರು, ಸಾಧ್ವಿರಿತ್ತಂಬರರವರು, ವಿಶ್ವೇಶ್ವರ ತೀರ್ಥ ಸ್ವಾಮೀಜಿಗಳು, ನನಗನ್ನಿಸುತ್ತಿದೆ ಒಂದು ರೀತಿಯಲ್ಲಿ ಬೆಂಕಿ ಚೆಂಡುಗಳ ಜೊತೆ ಕೇಂದ್ರ ಸರ್ಕಾರ ಆಟವಾಡುತ್ತಿದೆ. ಇವರೆಲ್ಲರೂ ಕೂಡ ದೇಶವನ್ನು ರಕ್ಷಣೆ ಮಾಡಬೇಕು ಮತ್ತು ಈ ದೇಶವನ್ನು ಪ್ರಪಂಚದಲ್ಲಿ ಸರಿಯಾದ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕೆನ್ನುವ ಅಪೇಕ್ಷೆಯನ್ನಿಟ್ಟುಕೊಂಡು ಈ ಎಲ್ಲಾ ಮಹಾ ಪುರುಷರ ನೇತೃತ್ವದಲ್ಲಿ ಈ ಹೋರಾಟ ನಡೆಯುತ್ತಿದೆ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಯಪ್ರಕಾಶ್ ನಾರಾಯಣ್ ರವರ ನೇತೃತ್ವದಲ್ಲಿ ಇಡೀ ದೇಶದ ಜನ ಮತ್ತೊಮ್ಮೆ ಎರಡನೇ ಸ್ವಾತಂತ್ರ್ಯ ಹೋರಾಟ ಮಾಡುತ್ತಿದ್ದಾರೆ ಎಂಬ ಭಾವನೆ ಅಂದು ಜನರಲ್ಲಿ ಮೂಡಿತ್ತು. ಆ ಸಂದರ್ಭದಲ್ಲಿ ಹೋರಾಟ ಮಾಡಿದ ಬೇಡಿಕೆ ಏನಾಗಿತ್ತೆಂದರೆ ವಾಕ್ ಸ್ವಾತಂತ್ರ್ಯ ಮತ್ತು ಪತ್ರಿಕಾ ಸ್ವಾತಂತ್ರ್ಯವನ್ನು ಹರಣ ಮಾಡಿದವರ ವಿರುದ್ಧ ಇಡೀ ದೇಶದಲ್ಲಿ ಹೋರಾಟ ನಡೆಯಿತು. ಆ ಸಂದರ್ಭದಲ್ಲಿ ಅನೇಕರ ಮೇಲೆ ಕೇಸ್ ಹಾಕಿದರು. ಇಂತಹ ಕೇಸುಗಳನ್ನು ಅಂದು ಯಾವುದಕ್ಕಾಗಿ ಮಾಡಿದರೆಂದರೆ ಭಾರತ ಮಾತಾಕೀ ಜೈ ಮತ್ತು ವಂದೇ ಮಾತರಂ ಎನ್ನುವಂತಹ ಘೋಷಣೆಗಳನ್ನು ಕೂಗಿ ರಾಷ್ಟ್ರ ದ್ರೋಹದ ಕೆಲಸ ಮಾಡಿದ್ದಾರೆ ಎನ್ನುವುದಾಗಿತ್ತು. ಇದು ಆ ತುರ್ತು ಪರಿಸ್ಥಿತಿಯಲ್ಲಿ ನಡೆದಂತ ಘಟನೆ ಜಯಪ್ರಕಾಶ್ ನಾರಾಯಣ್‌ರವರ ನೇತೃತ್ವದಲ್ಲಿ ಅಂದು ಈ ಹೋರಾಟ ನಡೆದಿತ್ತು. ಅದರ ಮುಂಚೆ ಸ್ವಾತಂತ್ರ್ಯ ಹೋರಾಟಕ್ಕೋಸ್ಕರ ಮಹಾತ್ಮ ಗಾಂಧೀಜಿಯವರ ಜೊತೆಯಲ್ಲಿ ಅನೇಕ ಹೋರಾಟಗಾರರು ನೇತೃತ್ವ ವಹಿಸಿದ್ದರು. ಇವತ್ತು ನನಗನ್ನಿಸುತ್ತಿದೆ ಇಂದು ನಡೆಯುತ್ತಿರುವುದು ಮೂರನೇ ಸ್ವಾತಂತ್ರ್ಯ ಹೋರಾಟ, ಈ ಹೋರಾಟದ ಸಂದರ್ಭದಲ್ಲಿ ಕೇಂದ್ರದ ಪ್ರಧಾನ

ಮಂತ್ರಿಗಳಾಗಿರಬಹುದು, ಯು.ಪಿ.ಎ. ಅಧ್ಯಕ್ಷರಿರಬಹುದು ಇದನ್ನು ಗಮನಿಸಬೇಕು. ಬಾಬಾ ರಾಮ್‌ದೇವ್‌ರ ನೇತೃತ್ವದಲ್ಲಿ ನಡೆಯುತ್ತಿರುವ ಈ ಒಂದು ಹೋರಾಟ ದೇಶದ ಹಿತಕ್ಕಾಗಿ ನಡೆಯುತ್ತಿರುವ ಹೋರಾಟ. ಬಾಬಾ ರಾಮ್‌ದೇವ್‌ರವರು ಪತ್ರಿಕಾಗೋಷ್ಠಿಯಲ್ಲಿ ಹೇಳಿಕೆಯೊಂದನ್ನು ಕೊಟ್ಟು ನನ್ನನ್ನು ಎನ್‌ಕೌಂಟರ್ ಮಾಡಿ ತೆಗೆದುಬಿಡುತ್ತಾರೆಂದು ಹೇಳಿದ್ದಾರೆ. ನಾನು ಈ ದೇಶಕ್ಕೋಸ್ಕರ ಪ್ರಾಣ ಕೊಡಲು ತಯಾರಿದ್ದೇನೆ ಎಂದು ಹೇಳಿದ್ದಾರೆ. ಆದರೆ ಕೋಟಿ ಕೋಟಿ ಜನರು ಬಾಬಾ ರಾಮ್‌ದೇವ್‌ರವರ ಜೀವವನ್ನು ಉಳಿಸುವುದಕ್ಕಾಗಿ ಬಲಿದಾನ ಮಾಡುವುದಕ್ಕೆ ತಯಾರಿದ್ದೇವೆಂದು ಹೇಳಿದ್ದಾರೆ. ಇದನ್ನು ಯು.ಪಿ.ಎ ಅಧ್ಯಕ್ಷರು ಮತ್ತು ಪ್ರಧಾನ ಮಂತ್ರಿಗಳು ಗಮನಿಸಬೇಕು. ಇದರಲ್ಲಿ ಯಾವುದೇ ರಾಜಕಾರಣ ಬರಕೂಡದು. ಕರ್ನಾಟಕ ರಾಜ್ಯದ ಜೆ.ಡಿ.(ಎಸ್) ನಾಯಕರು ಹೇಳುತ್ತಾರೆ. ಬಾಬಾ ರಾಮ್‌ದೇವ್‌ರವರ ಉದ್ದೇಶ ಒಳ್ಳೆಯದು, ಆದರೆ ಧರಣಿಯೊಂದರಲ್ಲಿ ಕೇಶವಕೃಪಾದ ಜನರು ಬಂದು ಕುಳಿತುಕೊಳ್ಳುತ್ತಾರೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಇಡೀ ದೇಶದ ಅನೇಕ ವಿರೋಧ ಪಕ್ಷಗಳು ಒಟ್ಟಾಗಿ ಸೇರಿಕೊಂಡಿದ್ದರು. ಭಾರತೀಯ ಜನಸಂಘ ತನ್ನ ಹೆಸರನ್ನು ಕೂಡ ಬಿಟ್ಟು ಹೋರಾಟ ಮಾಡಿತ್ತು. ಮಾನ್ಯ ಜೆ.ಡಿ.(ಎಸ್)ನ ಅಧ್ಯಕ್ಷರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ವಾಧಿಕಾರಿ ಧೋರಣೆಯನ್ನು ವಿರೋಧ ಮಾಡಿ ಮತ್ತೊಮ್ಮೆ ಈ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟಂತ ಭಾರತೀಯ ಜನತಾ ಪಾರ್ಟಿಯ ಒಂದು ಅಂಗ ಜನತಾದಳವಾಗಿ ಬಂತು. ಈ ಜನತಾದಳದ ಅಧ್ಯಕ್ಷರು ಇವತ್ತು ಹೇಳಿಕೆಯನ್ನು ಕೊಟ್ಟು ಕೇಶವಕೃಪಾದ ಬಗ್ಗೆ ಮಾತನಾಡುತ್ತಾರೆ. ಈ ದೇಶದ ಹಿತಕ್ಕೋಸ್ಕರ ಭಾರತೀಯ ಜನಸಂಘ ಎನ್ನುವ ಹೆಸರನ್ನು ಬಿಟ್ಟುಕೊಟ್ಟೆವು. ಭಾರತೀಯ ಜನತಾ ಪಕ್ಷವಿರಬಹುದು, ರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಯಿರಬಹುದು, ಇವರು ಹಿಂಬಾಗಿಲಿನಿಂದ ಪ್ರವೇಶ ಮಾಡುತ್ತಾರೆಂದು ಹೇಳಿದ್ದಾರೆ. ಈ ದೇಶಕ್ಕೆ ಗಂಡಾಂತರ ಬಂದಂತಹ ಸಂದರ್ಭದಲ್ಲಿ ಯಾವತ್ತೂ ಭಾರತೀಯ ಜನತಾ ಪಾರ್ಟಿ ಹಿಂಬಾಗಿಲಿನಿಂದ ಬಂದಿಲ್ಲ. ಈ ದೇಶದ ಹಿತಕ್ಕೋಸ್ಕರ 19 ತಿಂಗಳುಗಟ್ಟಲೆ ನಾವು ಜೈಲು ವಾಸ ಅನುಭವಿಸಿದ್ದೇವೆ. ಈಗ ಮತ್ತೊಮ್ಮೆ ಬಂದಿರುವಂಥ ಈ ಒಂದು ಪರಿಸ್ಥಿತಿಯನ್ನು ಎದುರಿಸುವುದಕ್ಕೆ ನಾವೆಲ್ಲರೂ ತೀರ್ಮಾನ ಮಾಡಿದ್ದೇವೆ. ಯಾರು ಈ ಕಪ್ಪು ಹಣದ ವಾರಸುದಾರರಿದ್ದಾರೆ ಅವರಿಗೆ ಶಿಕ್ಷೆಯಾಗಬೇಕು ಮತ್ತು ಕಪ್ಪು ಹಣ ಪೂರ್ಣವಾಗಿ ಈ ದೇಶಕ್ಕೆ ವಾಪಸ್ಸು ತರಬೇಕು. ಈ ನಿಟ್ಟಿನಲ್ಲಿ ಏನು ಹೋರಾಟ ನಡೆಯುತ್ತಿದೆ ಅದು ದೇಶವನ್ನು ಅಭಿವೃದ್ಧಿ ದಿಕ್ಕಿನಲ್ಲಿ

ತೆಗೆದುಕೊಂಡು ಹೋಗತಕ್ಕಂಥ ಹೋರಾಟವಾಗಿದೆ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಇವತ್ತು ನಮ್ಮ ಈ ವಿಧಾನಸಭೆಯಲ್ಲಿ ಈ ರೀತಿಯ ಒಂದು ನಿರ್ಣಯವನ್ನು ಸ್ವಾತಂತ್ರ್ಯ ಭಾರತದಲ್ಲಿ ಮಂಡನೆ ಮಾಡಿ, ಅದನ್ನು ಚರ್ಚೆ ಮಾಡುತ್ತಿರುವ ಸ್ಥಿತಿ ಈ ದೇಶಕ್ಕೆ ಬಂದಿರುವುದೇ ಒಂದು ಅಪಮಾನ. ಈ ದೇಶದಲ್ಲಿ ಏನಾಗಬೇಕಿತ್ತೆಂದರೆ ದೇಶದ ಯುವಕರಿಗೆ ಸ್ಫೂರ್ತಿ ಬರುವಂತಹ ನಿರ್ಣಯಗಳನ್ನು ಕೊಡಬೇಕಾಗಿತ್ತು. ದುರಾದೃಷ್ಟ ಕೇಂದ್ರ ಸರ್ಕಾರ ರಾಷ್ಟ್ರ ಭಕ್ತರ ಮೇಲೆ ಸರ್ವಾಧಿಕಾರಿ ಧೋರಣೆ, ದಬ್ಬಾಳಿಕೆ, ಸಾಧು ಸಂತರ ಮೇಲೆ ಅಕ್ರಮಣ, ಮಹಿಳೆಯರ ಮೇಲೆ ಅನ್ಯಾಯ, ದಬ್ಬಾಳಿಕೆ, ಮಕ್ಕಳ ಮೇಲೆ ಅನ್ಯಾಯವಾಗಿರುವುದನ್ನು ಈ ಒಂದು ವಿಧಾನಸಭೆ ಖಂಡಿಸಿದೆ. ಏಕೆಂದರೆ ವಿಧಾನಸಭೆ ಪ್ರಜಾಪ್ರಭುತ್ವದ ದೇವಾಲಯ. ಈ ದೇವಾಲಯದಲ್ಲಿ ಪ್ರಜಾಪ್ರಭುತ್ವದ ವಿಚಾರದಲ್ಲಿ ನ್ಯಾಯ ಸಿಗಬೇಕು, ಅದಕ್ಕೋಸ್ಕರ ನಿಜಕ್ಕೂ ಕೂಡ ಇವತ್ತು ಚರ್ಚೆ ಮಾಡುತ್ತಿರುವ ಅಂಶದ ಬಗ್ಗೆ ಇಡೀ ರಾಜ್ಯ, ದೇಶ ನೋಡುತ್ತಿದೆ. ತಪ್ಪು ಮಾಡಿರುವಂತಹ ವ್ಯಕ್ತಿಗಳು ಅವರ ಕ್ಷಮೆ ಕೇಳಬೇಕಾಗುತ್ತದೆ. ಏಕೆಂದರೆ ಆಗ ಸರ್ವಾಧಿಕಾರಿಣಿಯಾಗಿ ತುರ್ತು ಪರಿಸ್ಥಿತಿ ತಂದಂತಹ ಆಗಿನ ಪ್ರಧಾನ ಮಂತ್ರಿಯವರು ತಪ್ಪನ್ನು ಅರ್ಥ ಮಾಡಿಕೊಳ್ಳುವ ಹೊತ್ತಿಗೆ ಕಾಲ ಮಿಂಚಿತ್ತು. ಅವರು ಅಧಿಕಾರವನ್ನು ಕಳೆದುಕೊಂಡರು. ಈಗಿನ ಪ್ರಧಾನ ಮಂತ್ರಿ, ಈಗಿನ ಯುಪಿಎ ಚೇರ್‌ಮನ್ ಆ ಒಂದು ಪಾಠವನ್ನು ಕಲಿಯಬೇಕಾಗಿದೆ. ತುರ್ತು ಪರಿಸ್ಥಿತಿಯಲ್ಲಿ ನಡೆದಂತಹ ವ್ಯವಸ್ಥೆ, ಅದರ ವಿರುದ್ಧ ಇಡೀ ದೇಶದಲ್ಲಿ ಜನಜಾಗೃತಿ, ಇಡೀ ದೇಶದ ರಾಷ್ಟ್ರ ಭಕ್ತ ನಾಯಕರ ನೇತೃತ್ವ ಯಾವ ರೀತಿ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸಿಕ್ಕಿತ್ತು, ಮತ್ತೊಮ್ಮೆ ಅದೇ ರೀತಿ ಈ ದೇಶದಲ್ಲಿ ದೇಶ ಭಕ್ತರ ನಾಯಕತ್ವದ ಕೊರತೆಯಿರುವುದಕ್ಕೆ ಸಾಧ್ಯವಿಲ್ಲ. ನಾನು ಯುಪಿಎ ಚೇರ್‌ಮನ್, ಪ್ರಧಾನ ಮಂತ್ರಿಯವರಿಗೆ ಪ್ರಾರ್ಥನೆ ಮಾಡುತ್ತೇನೆ, ದೇಶದ ಹಿತದೃಷ್ಟಿಯಿಂದ ನಡೆಯುತ್ತಿರುವಂತಹ ಈ ಬೇಡಿಕೆಗಳನ್ನು ಗಮನಿಸಿ, ಶ್ರೀ ರಾಮ್‌ದೇವ್‌ರವರ ಮೇಲೆ ನಡೆದಂತಹ ಅಮಾನುಷ ಕೃತ್ಯದ ಬಗ್ಗೆ ತಕ್ಷಣ ದೇಶದ ಜನರ ಕ್ಷಮೆಯನ್ನು ಕೇಳಬೇಕು. ಎರಡನೆಯದಾಗಿ ಯಾವ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಹೋರಾಟ ನಡೆದಿದೆ, ಆ ಹೋರಾಟ ಈಡೇರುವತನಕ ಕೂಡ ವಿಶ್ರಮಿಸುವುದಿಲ್ಲವೆನ್ನುವಂತಹ ಮಾತನ್ನು ಈ ದೇಶದ ಎಲ್ಲಾ ನಾಯಕರು ಹೇಳಿದ್ದು, ಆ ಬೇಡಿಕೆಗಳು ದೇಶದ ಹಿತದೃಷ್ಟಿಯಿಂದ ಇರುವಂತಹ ಬೇಡಿಕೆಗಳು. ಆ ಹಣ ದೇಶಕ್ಕೆ ಬಂದು ದೇಶದಲ್ಲಿರುವಂತಹ ಹಳ್ಳಿ ಹಳ್ಳಿಗಳು ಅಭಿವೃದ್ಧಿಯಾಗಬೇಕಾಗಿದೆ. ಆ ಕಪ್ಪು ಹಣವನ್ನು ಇಟ್ಟಂತಹ ದೇಶದ್ರೋಹಿಗಳ

ಹೆಸರಿನ ಪಟ್ಟಿಯನ್ನು ತಕ್ಷಣ ಬಿಡುಗಡೆ ಮಾಡಬೇಕು. ಅವರಿಗೆ ಏನು ಶಿಕ್ಷೆ ಆಗಬೇಕೋ, ಆ ಶಿಕ್ಷೆಯಾಗಲೇಬೇಕು. ಆ ದಿಕ್ಕಿನಲ್ಲಿ ಕೇಂದ್ರ ಸರ್ಕಾರ ಗಮನಿಸಬೇಕೆನ್ನುವ ಅಂಶವನ್ನು ಒತ್ತಾಯ ಮಾಡುತ್ತೇನೆ. ಪಕ್ಷದ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ. ಇಡೀ ದೇಶಕ್ಕೆ ಸ್ವಾತಂತ್ರ್ಯವನ್ನು ತಂದುಕೊಟ್ಟ ವ್ಯಕ್ತಿಗಳನ್ನು ನಾವು ಮೇಲಿಂದ ಮೇಲೆ ನೆನಪು ಮಾಡಿಕೊಳ್ಳುತ್ತಿದ್ದೇವೆ. ಸ್ವಾತಂತ್ರ್ಯವನ್ನು ತಂದುಕೊಟ್ಟಂತಹ ವ್ಯಕ್ತಿಗಳು ಇವತ್ತು ಸ್ವರ್ಗದಲ್ಲಿದ್ದಾರೆ. ಮಾನ್ಯ ಚಂದ್ರಶೇಖರ್ ಆಜಾದ್, ಸ್ವಾತಂತ್ರ್ಯವೀರ ಸಾವರ್ಕರ್, ಸುಭಾಷ್‌ಚಂದ್ರ ಬೋಸ್, ಮಹಾತ್ಮ ಗಾಂಧಿ. ಕೇವಲ ಇವರುಗಳ ಹೆಸರು ಹೇಳುವುದಿಲ್ಲ. ಇವರು ಕೇವಲ ಪ್ರಾತಃಸ್ಮರಣೀಯವಾಗುವುದಕ್ಕಲ್ಲ, ಅವರ ಹೋರಾಟ, ಮಾರ್ಗದರ್ಶನ, ಜೀವನ ಚರಿತ್ರೆ ನಿಜಕ್ಕೂ ಕೂಡ ನಮ್ಮೆಲ್ಲರಿಗೂ ಮಾರ್ಗದರ್ಶನವಾಗಿದೆ. ಹೀಗಾಗಿ ಅವರ ಆತ್ಮಕ್ಕೆ ಶಾಂತಿ ಕೊಡುವಂತಹ ದಿಕ್ಕಿನಲ್ಲಿ ಇಡೀ ದೇಶದಲ್ಲಿ ಮತ್ತೊಮ್ಮೆ ಮೂರನೇ ಸ್ವಾತಂತ್ರ್ಯಕ್ಕೋಸ್ಕರ ಹೋರಾಟ ಮಾಡುವಂತಹ ಪರಿಸ್ಥಿತಿ ಬಾರದ ರೀತಿಯಲ್ಲಿ ಕೇಂದ್ರ ಸರ್ಕಾರ ಗಮನಿಸಬೇಕು. ಪ್ರಧಾನ ಮಂತ್ರಿಗಳು, ಯುಪಿಎ ಚೇರ್‌ಮನ್‌ರವರು ಈ ದಿಕ್ಕಿನಲ್ಲಿ ಗಮನ ಹರಿಸಲಿಲ್ಲವೆಂದರೆ ಇದಕ್ಕೋಸ್ಕರ ಸರಿಯಾದ ಬೆಲೆಯನ್ನು ತರಬೇಕಾಗುತ್ತದೆನ್ನುವ ಎಚ್ಚರಿಕೆ ಈ ಸಂದರ್ಭದಲ್ಲಿ ಕೊಡುತ್ತಾ ಇಡೀ ದೇಶದ ಜನರು ಆಂದೋಲನ ಮಾಡದ ರೀತಿಯಲ್ಲಿ ಕೇಂದ್ರದವರು ಗಮನವನ್ನು ಹರಿಸಿ, ತಕ್ಷಣ ಆ ಬೇಡಿಕೆಗಳು ಈಡೇರುವ ದಿಕ್ಕಿನಲ್ಲಿ ಗಮನವನ್ನು ಹರಿಸಿ, ತಕ್ಷಣ ಆ ಬೇಡಿಕೆಗಳು ಈಡೇರುವ ದಿಕ್ಕಿನಲ್ಲಿ ಗಮನವನ್ನು ಕೊಡಬೇಕು. ಬಾಬಾ ರಾಮ್‌ದೇವ್‌ರವರ ಈ ಒಂದು ದುಷ್ಕೃತ್ಯಕ್ಕೆ ಕಾರಣರಾದಂತಹ ವ್ಯಕ್ತಿಗಳು ಕ್ಷಮೆ ಕೇಳಲಿ. ಮತ್ತೊಮ್ಮೆ ಈ ದೇಶದಲ್ಲಿ ಮೂರನೆ ಹೋರಾಟ ಆಗದಿರುವಂತಹ ದಿಕ್ಕಿನಲ್ಲಿ ಅವರು ಗಮನಿಸಲಿ ಎಂದು ತಿಳಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಟಿ.ರವಿ(ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರಾದಂತಹ ಬಚ್ಚೇಗೌಡರು ಒಂದು ಒಳ್ಳೆಯ ನಿರ್ಣಯವನ್ನು ಮಂಡಿಸಿ ಈ ಮೂಲಕ ದೇಶಕ್ಕೆ ಒಳ್ಳೆಯ ಸಂದೇಶವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುವುದಕ್ಕೆ ಬಯಸುತ್ತೇನೆ. Switzerland ನ Swiss Bank ನ ಒಬ್ಬ ನಿರ್ದೇಶಕ ಭಾರತ ಶ್ರೀಮಂತ ರಾಷ್ಟ್ರ, ಆದರೆ ಭಾರತೀಯರು ಮಾತ್ರ ಬಡವರು ಎಂದು ಹೇಳುತ್ತಾರೆ. ಆತ ಆ ರೀತಿ ಹೇಳಬೇಕಾದರೆ, ಉಲ್ಲೇಖ ಮಾಡಿದ ಅಂಶ ಏನೆಂದರೆ ನಮ್ಮ ದೇಶದ ಬ್ಯಾಂಕುಗಳಲ್ಲಿ ಅತೀ ಹೆಚ್ಚು ಹಣವನ್ನು ಇಟ್ಟಿರತಕ್ಕಂಥವರು ಭಾರತೀಯರು. 350 ಲಕ್ಷ ಕೋಟಿ ರೂಪಾಯಿಗಳಿಗೂ ಹೆಚ್ಚು ಭಾರತೀಯರ ಹಣ ನಮ್ಮ

ದೇಶದಲ್ಲಿದೆ ಎಂದು ಹೇಳುತ್ತಾರೆ. 350 ಲಕ್ಷ ಕೋಟಿ ರೂಪಾಯಿಗಳು ಎಂದರೆ ಎಷ್ಟು ಎಂದು ನನಗಂತೂ ಅಂದಾಜಿಗೆ ಬರುವುದಿಲ್ಲ. ಆದರೆ ಪಟ್ಟಿ ಮಾಡಿದಂತಹ ಒಬ್ಬ ವ್ಯಕ್ತಿ ಹೇಳಿದರು, ನಮ್ಮ ದೇಶದಲ್ಲಿರುವ ಹಳ್ಳಿಗಳಿಗೆ ಪ್ರತಿ ಹಳ್ಳಿಗಳಿಗೆ ನೂರು ಕೋಟಿ ರೂಪಾಯಿಗಳನ್ನು ಮೂಲ ಸೌಕರ್ಯಗಳಿಗೆ ವಿನಿಯೋಗಿಸಬಹುದಾದಷ್ಟು ಹಣ ಇದು ಎಂದು ಹೇಳಿದರು. ಒಂದು ಹಳ್ಳಿಗೆ ನೂರು ಕೋಟಿ ರೂಪಾಯಿ ಬರುತ್ತದೆ ಎಂದರೆ ಅದರ ಅಗಾಧವಾಗಿರತಕ್ಕಂಥ ಸಂಪತ್ತಿನ ಪ್ರಮಾಣವನ್ನು ಲೆಕ್ಕ ಹಾಕಬಹುದು. 30 ವರ್ಷಗಳ ಕಾಲ ನಮ್ಮ ದೇಶದಲ್ಲಿರುವಂತಹ ಪ್ರತಿಯೊಬ್ಬರಿಗೂ ತಿಂಗಳಿಗೆ ಎರಡು ಸಾವಿರ ರೂಪಾಯಿ ಹಣವನ್ನು ಆ ಹಣದಲ್ಲಿ ಮುಫತ್ತಾಗಿ ಕೊಡಬಹುದಂತೆ. ಹಾಗಿದ್ದರೆ ನಮ್ಮ ದೇಶ ಬಡರಾಷ್ಟ್ರವೇ? ನಮ್ಮದು ತೃತೀಯ ಜಗತ್ತಿನ ಹಿಂದುಳಿದ ದೇಶವೇ? ಉದ್ದೇಶಪೂರ್ವಕವಾಗಿ ನಮ್ಮ ದೇಶದ ಸಂಪತ್ತನ್ನು ಲೂಟಿ ಹೊಡೆದು ಕೆಲವೇ ಜನ ನಮ್ಮ ದೇಶವನ್ನು ಹಿಂದುಳಿದ ತೃತೀಯ ಜಗತ್ತಿನ ರಾಷ್ಟ್ರವನ್ನಾಗಿ ದೂಡಿದ್ದಾರೆಂದು ನಾನು ವ್ಯಥೆಯಿಂದ ಹೇಳುವುದಕ್ಕೆ ಬಯಸುತ್ತೇನೆ. ಇದರ ವಿರುದ್ಧ ಯಾರಾದರೂ ಧ್ವನಿ ಎತ್ತಬೇಕಾಗಿತ್ತು. ಕಳೆದ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಹಿರಿಯ ನಾಯಕರಾದಂತಹ ಶ್ರೀ ಲಾಲ್‌ಕೃಷ್ಣ ಅಡ್ವಾಣಿಯವರು ವಿದೇಶಿ ಬ್ಯಾಂಕುಗಳಲ್ಲಿ ಹಣವನ್ನು ಇಟ್ಟಿರುವಂತಹ ಹೆಸರುಗಳನ್ನು ಬಿಡುಗಡೆ ಮಾಡಿ, ಆ ಅಕ್ರಮ ಸಂಪತ್ತನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಸಾರ್ವಜನಿಕ ವೇದಿಕೆಯಲ್ಲಿ ತಮ್ಮ ಭಾವನೆಯನ್ನು ಹಂಚಿಕೊಂಡರು. ಆ ಕ್ಷಣದಲ್ಲಿ ಎಚ್ಚೆತ್ತಂಥ ಕೇಂದ್ರ ಸರ್ಕಾರ, ಗೌರವಾನ್ವಿತ ಪ್ರಧಾನ ಮಂತ್ರಿಗಳು ಚುನಾವಣೆ ನಡೆದ ನೂರು ದಿನದೊಳಗೆ ಅಷ್ಟೂ ಜನರ ಹೆಸರುಗಳನ್ನು ಬಿಡುಗಡೆ ಮಾಡಿ ಕಪ್ಪು ಹಣವನ್ನು ವಾಪಸ್ಸು ತರುವುದಕ್ಕೆ ಬೇಕಾದಂತಹ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆಂದು ದೇಶದ ಜನತೆಗೆ ತಮ್ಮ ಚುನಾವಣಾ ಪ್ರಣಾಳಿಕೆಯ ಮೂಲಕ ಮಾತು ಕೊಟ್ಟರು. ಈ ರೀತಿ ಚುನಾವಣಾ ಪ್ರಣಾಳಿಕೆ ಮೂಲಕ ಮಾತು ಕೊಟ್ಟವರು ಬಹುಶಃ ನಮ್ಮ ಅಸಹಾಯಕತೆಯ ಕಾರಣದಿಂದ ಮರೆತುಬಿಟ್ಟರು ಎಂದು ಕಾಣುತ್ತದೆ, ಅಥವಾ black money mafia ಕ್ರಮ ತೆಗೆದುಕೊಳ್ಳದಂತೆ ಅವರನ್ನು ಅಸಹಾಯಕರನ್ನಾಗಿ ಮಾಡಿರಬಹುದು. ಅವರ ಅಸಹಾಯಕತೆಯನ್ನು ಮನಗಂಡು ದೇಶದ ಜನರನ್ನು ಜಾಗೃತಿಗೊಳಿಸಿ ಆ ಮೂಲಕ ಕಪ್ಪು ಹಣವನ್ನು ವಾಪಸ್ಸು ತೆಂದು ದೇಶವನ್ನು ಸಂಪದ್ಭರಿತವನ್ನಾಗಿ ಮಾಡಬೇಕೆಂದು ಹೇಳಿ ಈ ನಾಡಿನ ಯೋಗ ಗುರು ಸಂತ ಬಾಬಾ ರಾಮ್‌ದೇವ್, ಅಣ್ಣ ಹಜಾರೆಯಂಥವರು ಪ್ರಯತ್ನಪಟ್ಟು 400ಲಕ್ಷ ಕೋಟಿ

ರೂಪಾಯಿ ಕಪ್ಪು ಹಣವನ್ನು ವಾಪಸ್ಸು ತರಬೇಕೆನ್ನುವ ಬೇಡಿಕೆಯನ್ನು ಮುಂದಿಟ್ಟುಕೊಂಡು, ಈ ದೇಶದ ಆರು ಕೋಟಿ ಜನರ ಸಹಿ ಸಂಗ್ರಹ ಮಾಡಿ ರಾಷ್ಟ್ರಪತಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಸಲ್ಲಿಸಿ, ಮೂರ್ನಾಲ್ಕು ತಿಂಗಳ ಹಿಂದೆಯೇ ದಿನಾಂಕವನ್ನು ನಿಶ್ಚಯ ಮಾಡಿ ರಾಮಲೀಲಾ ಮೈದಾನದಲ್ಲಿ ಸತ್ಯಾಗ್ರಹ ಕುಳಿತಿದ್ದರು. ಅವರು ಯಾರನ್ನೂ ಕಳ್ಳರು ಎಂದು ಹೇಳಿರಲಿಲ್ಲ. ಭ್ರಷ್ಟಾಚಾರಿಗಳಿಗೆ ಶಿಕ್ಷೆಯಾಗಬೇಕು. ಮತ್ತು 400 ಲಕ್ಷ ಕೋಟಿ ರೂಪಾಯಿ ಕಪ್ಪು ಹಣ ದೇಶಕ್ಕೆ ವಾಪಸ್ಸು ಬರಬೇಕು ಎಂದು ಹೇಳಿದ್ದರು. ಈ ರೀತಿ ಹೇಳಿದ ತಕ್ಷಣವೇ ಕೆಲವರು ಭಯ ಬಿದ್ದರು, ಆತಂಕಕ್ಕೆ ಒಳಗಾಗಿ ದೌರ್ಜನ್ಯದ ಮೂಲಕ 4ನೇ ತಾರೀಖು ಮಧ್ಯರಾತ್ರಿ ಶಾಂತಿಯುತವಾಗಿ ಸತ್ಯಾಗ್ರಹ ಮಾಡುತ್ತಿದ್ದಂತಹ ಸತ್ಯಾಗ್ರಹಿಗಳ ಮೇಲೆ, ಜಗತ್ತಿನ ಇನ್ಯಾವುದೇ ಇತಿಹಾಸದಲ್ಲಿ ಬಹುಶಃ ಒಂದು ನಾಗರೀಕ ಸರ್ಕಾರ ಈ ರೀತಿ ನಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಮಧ್ಯರಾತ್ರಿಯಲ್ಲಿ ಮಲಗಿದ್ದವರ ಮೇಲೆ ಶೆಲ್ ದಾಳಿ ಮಾಡುವುದು, ಈ ರೀತಿ ಬಹುಶಃ ಇನ್ಯಾವುದೇ ಸರ್ಕಾರ ನಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಬ್ರಿಟಿಷರೂ ಕೂಡ ಮಧ್ಯರಾತ್ರಿಯಲ್ಲಿ ಮಲಗಿದ್ದವರ ಮೇಲೆ ಶೆಲ್ ದಾಳಿ ಮಾಡಿದ ಉದಾಹರಣೆಯನ್ನು ನಾನು ಇತಿಹಾಸದ ಪುಟದಲ್ಲಿ ಓದಲಿಲ್ಲ. ಆದರೆ ಜಗತ್ತಿನ ಮಟ್ಟದಲ್ಲಿ ಪ್ರಜಾಪ್ರಭುತ್ವ ದೇಶಗಳು ತಲೆತಗ್ಗಿಸುವಂತಹ ರೀತಿಯಲ್ಲಿ ನಮ್ಮ ದೇಶದ ಕೇಂದ್ರ ಸರ್ಕಾರ ದೆಹಲಿಯಲ್ಲಿ ಸತ್ಯಾಗ್ರಹಿಗಳ ಮೇಲೆ ಶೆಲ್ ದಾಳಿ ಮಾಡಿ, ಅಮಾಯಕರ ಮೇಲೆ ಲಾಠಿ ಪ್ರಹಾರ ಮಾಡುವುದರ ಮೂಲಕ ಅಮಾನುಷವಾಗಿ ವರ್ತಿಸಿದೆ ಎಂದು ನಾನು ಸಂಕಟದಿಂದ ಹೇಳುವುದಕ್ಕೆ ಬಯಸುತ್ತೇನೆ. ಎಷ್ಟರಮಟ್ಟಿಗೆ ಅಮಾನುಷವಾಗಿ ವರ್ತಿಸಿದರು ಎಂದು ನಾವೆಲ್ಲರೂ ಕೂಡ ದೂರದರ್ಶನದಲ್ಲಿ ವಿವಿಧ ಮಾಧ್ಯಮಗಳ ಮೂಲಕ ನೋಡಿದ್ದೇವೆ. ಹಾಗಾದರೆ ಬಾಬಾ ರಾಮ್‌ದೇವ್ ಎತ್ತಿದ ಪ್ರಶ್ನೆ ಏನು? ಅಕ್ರಮವಾಗಿ ಇಟ್ಟಿರತಕ್ಕಂಥ ಈ ದೇಶದ ಕಪ್ಪು ಹಣವನ್ನು ವಾಪಸ್ಸು ತನ್ನಿ ಎನ್ನುವುದು ಅಪರಾಧವೇ? ಅದು ಅಪರಾಧವೆಂದು ಕೇಂದ್ರದ ಆಳುವವರಿಗೆ ಏಕೆ ಅನ್ನಿಸಿತು? ಅವರಿಗೆ ಇದು ಅಪರಾಧ ಎಂದು ಅನ್ನಿಸಿದರೆ ಬಹುಶಃ ಈ ಕಪ್ಪು ಹಣವನ್ನು ಇಟ್ಟಿರತಕ್ಕಂಥವರಲ್ಲಿ ಸಿಂಹಪಾಲು ಅವರದ್ದೇ ಇರಬಹುದು ಎನ್ನುವ ಅನುಮಾನ ನನ್ನನ್ನು ಕಾಡುತ್ತಿದೆ. ಅವರದ್ದೇ ಕಪ್ಪು ಹಣ ಇರುವುದರಿಂದ ಭ್ರಷ್ಟಾಚಾರಿಗಳ ಮೇಲೆ ಶಿಕ್ಷೆ ವಿಧಿಸಬೇಕು ಎಂದ ತಕ್ಷಣ ಭಯಬೀಳುತ್ತಾರೆ. ಕಪ್ಪು ಹಣ ವಾಪಸ್ಸು ತೆಗೆದುಕೊಳ್ಳಬೇಕೆಂದ ತಕ್ಷಣ ಆತಂಕಕ್ಕೆ ಒಳಗಾಗುತ್ತಾರೆ. ಬಹುಶಃ ಆ ಎಲ್ಲಾ ಕಪ್ಪು ಹಣ ವಾಪಸ್ಸು ಬಂದರೆ ಅವರೆಲ್ಲರೂ ಬಿಪಿಎಲ್ ಕಾರ್ಡ್‌ನಲ್ಲಿ ಜೀವನ ಮಾಡುವಂತಹ ಪರಿಸ್ಥಿತಿ

ಬರಬಹುದು. ಏಕೆಂದರೆ ಅದು ಯಾರೂ ಕೂಡ ಕಷ್ಟಪಟ್ಟು ಸಂಪಾದನೆ ಮಾಡಿದಂತಹ ಹಣವಲ್ಲ. ಈ ದೇಶವನ್ನು ಲೂಟಿ ಮಾಡಿ ವಿದೇಶದ ಬ್ಯಾಂಕುಗಳಲ್ಲಿ ಇಟ್ಟಿರುವಂತಹ ಹಣ. ನಮ್ಮ ದೇಶ ಬಡ ರಾಷ್ಟ್ರವಲ್ಲವೆಂದು ನಾವು ಗಟ್ಟಿಯಾಗಿ ಹೇಳಬಹುದು. ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಸರ್ಕಾರದ ಕೇವಲ ನಾಲ್ಕು ಹಗರಣಗಳ ಒಟ್ಟು ಮೊತ್ತ ಮೂರೂವರೆ ಲಕ್ಷಕೋಟಿ ರೂಪಾಯಿಗಳಾಗಿವೆ. 2G spectrum ಹಗರಣ 1,76,000 ಕೋಟಿ ರೂ.ಗಳು, ಕಾಮನ್‌ವೆಲ್ತ್ ಕ್ರೀಡಾ ಹಗರಣ 85,000 ಕೋಟಿ ರೂ.ಗಳು, Food Scam 32,000 ಕೋಟಿ ರೂ.ಗಳು, ಹಸನ್ ಆಲಿಯ ತೆರಿಗೆ ವಂಚನೆ ಪ್ರಕರಣ 53,000 ಕೋಟಿ ರೂ.ಗಳು ಒಬ್ಬ 53,000 ಕೋಟಿ ರೂ.ಗಳ ತೆರಿಗೆಯನ್ನು ವಂಚಿಸಿ ಈ ದೇಶದಲ್ಲಿರುತ್ತಾನೆಂದರೆ, ಇನ್ನು ಎಷ್ಟು ಸಾವಿರ ಕೋಟಿ ರೂಪಾಯಿಗಳ ವ್ಯವಹಾರಗಳನ್ನು ಅವನು ಮಾಡಿರಬಹುದು? ಆ ರೀತಿ 53,000 ಕೋಟಿ ರೂ.ಗಳ ತೆರಿಗೆ ವಂಚನೆ ಮಾಡುವವರೆಗೆ ಅವನ ಮೇಲೆ ಯಾವುದೇ ಕ್ರಮವನ್ನು ಕೈಗೊಳ್ಳದೆ ಏಕೆ ಬಿಟ್ಟರು? ಅಂದರೆ, black money ಮಾಫಿಯಾದ ಜೊತೆಗೆ ಕೇಂದ್ರ ಸರ್ಕಾರ ಆಳುವವರು ಕೈ ಜೋಡಿಸಿದ್ದಾರೆ. ಅವರು black money ಮಾಫಿಯಾದವರೊಂದಿಗೆ ಪಾಲುದಾರರಾಗಿದ್ದಾರೆ. ಆ ರೀತಿ ಪಾಲುದಾರರಾಗಿರುವ ಹಿನ್ನೆಲೆಯಲ್ಲಿ ಅವರು ಕಪ್ಪು ಹಣವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಯಾವುದೇ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಅದಕ್ಕಾಗಿಯೇ ಮೂಲಭೂತ ಹಕ್ಕುಗಳನ್ನು ಗಮನಿಸುವ ರೀತಿಯಲ್ಲಿ, ಸತ್ಯಾಗ್ರಹಿಗಳ ಧ್ವನಿಯನ್ನು ಹತ್ತಿಕ್ಕುವ ರೀತಿಯಲ್ಲಿ 4ನೇ ತಾರೀಖಿನ ಮಧ್ಯರಾತ್ರಿಯಲ್ಲಿ ದೌರ್ಜನ್ಯವನ್ನು ನಡೆಸುವಂಥ ಕೆಲಸವನ್ನು ಮಾಡಿದ್ದಾರೆಂದು ನಾನು ಹೇಳಬಯಸುತ್ತೇನೆ. ಹೀಗೆ ಮಾಡುವ ಮೂಲಕ ದೇಶದ ಜನರಿಗೆ ಅಪಮಾನ ಮಾಡಿರುವಂಥದ್ದು. ಅವರಿಗೆ ಯೋಗ ಶಕ್ತಿಯ ಬಗ್ಗೆ ಎಲ್ಲೋ ಒಂದು ಕಡೆ ಭಯವಿದ್ದ ಹಾಗೆ ಕಾಣುತ್ತದೆ. ಆ ಯೋಗ ಶಕ್ತಿಯ ಬಗ್ಗೆ ಭಯವಿರುವ ಕಾರಣಕ್ಕೋಸ್ಕರವೇ ರಾಷ್ಟ್ರೀಯ ಪಕ್ಷದ ಪ್ರಧಾನ ಕಾರ್ಯದರ್ಶಿಯವರು ಬಾಬಾ ರಾಮ್‌ದೇವ್‌ರವರನ್ನು "ವಂಚಕ" ಎಂದು ಹೇಳುತ್ತಾರೆ. ನಾನು ಅವರನ್ನು ಕೇಳಬಯಸುವುದೇನೆಂದರೆ, ನಿಮ್ಮದೇ ಪಕ್ಷದ ಮೂವರು ಹಿರಿಯ ಸಚಿವರುಗಳು ನೀವು ವಂಚಕ ಎಂದು ಆರೋಪ ಮಾಡುವವರ ಜೊತೆಯಲ್ಲಿ ಎರಡು-ಮೂರು ದಿವಸಗಳು ವಿಮಾನ ನಿಲ್ದಾಣಕ್ಕೇ ಹೋಗಿ ಅವರೊಂದಿಗೆ ಮಾತನಾಡಿದ್ದಾರಲ್ಲಾ, ಏಕೆ ಮಾತನಾಡಿದ್ದೀರಿ? ಅದಕ್ಕೆ ಅವರ ಹತ್ತಿರ ಉತ್ತರವಿಲ್ಲ. ದೇಶದ ಜನರನ್ನು ವಂಚಿಸುವ ರೀತಿಯಲ್ಲಿ ಅವರು ನಡೆದುಕೊಂಡಿದ್ದಾರೆ. ಈ ರೀತಿ ಮೂಲಭೂತ ಹಕ್ಕುಗಳನ್ನು ಗಮನಿಸುವ ರೀತಿಯಲ್ಲಿ, ಮಾನವ ಹಕ್ಕುಗಳನ್ನು

ಗಮನಿಸುವ ರೀತಿಯಲ್ಲಿ, ದೌರ್ಜನ್ಯ ನಡೆಸಿರುವಂಥ ವಿಧಾನ ಖಂಡನೀಯವಾದದ್ದು. ನಮ್ಮ ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಕೆ.ಎಸ್.ಈಶ್ವರಪ್ಪನವರು ಹೇಳಿರುವ ರೀತಿಯಲ್ಲಿ ನಮ್ಮ ದೇಶದ ಹಿತಾಸಕ್ತಿಯ ಪರವಾಗಿ ಯಾರೇ ಹೋರಾಟವನ್ನು ಮಾಡಿದರೂ ಕೂಡ, ಎಲ್ಲರೂ ಯಾವುದೇ ಪಕ್ಷಭೇದವಿಲ್ಲದೇ ಅವರಿಗೆ ಬೆಂಬಲಿಸಬೇಕಾಗಿರುವಂಥದ್ದು, ದೇಶ ಭಕ್ತಿಯ ದ್ಯೋತಕವಾಗಿದೆ. ಆ ದೇಶಭಕ್ತಿಯನ್ನು ಮರೆತು ಕೆಲವರು ವರ್ತಿಸುತ್ತಿರುವಂಥದ್ದು, ಹೇಳಿಕೆಗಳನ್ನು ಕೊಡುತ್ತಿರುವಂಥದ್ದು, ದುರದೃಷ್ಟಕರವಾಗಿದೆ. ಯಾರಿಗಾದರೂ ಕನಿಷ್ಠ ದೇಶ ಪ್ರೇಮವಿದ್ದರೆ ತಕ್ಷಣ ಆ ಕಪ್ಪು ಹಣವನ್ನು ವಾಪಸ್ಸು ತರುವಂಥ ಅಗತ್ಯ ಕ್ರಮವನ್ನು ಕೈಗೊಳ್ಳಬೇಕು, ಮತ್ತು ಸಂತನಿಗೆ ಅಪಮಾನ ಮಾಡಿರುವುದಕ್ಕೆ, ಸ್ವಾತಂತ್ರ್ಯ ಹರಣವಾಗುವ ರೀತಿಯಲ್ಲಿ ವರ್ತನೆ ಮಾಡಿದ ಕಾರಣಕ್ಕೋಸ್ಕರ ಈ ದೇಶದ ಜನರ ಬಳಿ ಕ್ಷಮೆಯಾಚಿಸಬೇಕೆಂಬ ಆಗ್ರಹವನ್ನು ತಮ್ಮ ಮೂಲಕ ನಾನು ಈ ಸಭೆಯಲ್ಲಿ ಮಾಡಲಿಚ್ಛಿಸುತ್ತೇನೆ. ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ(ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ತಂದಿರುವಂಥ ನಿರ್ಣಯವನ್ನು ಬಹುಶಃ ಈ ದೇಶದ ಎಲ್ಲಾ ಜನರು ಸ್ವಾಗತ ಮಾಡುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸ್ವಾಮಿ ಬಾಬಾ ರಾಮದೇವ್‌ರವರು ಮತ್ತು ಅಣ್ಣಾ ಹಜಾರೆಯವರು ಮಾಡುತ್ತಿರುವಂಥ ಹೋರಾಟ ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರೂ ಸಹ ಅತ್ಮಾವಲೋಕನ ಮಾಡಿಕೊಳ್ಳುವಂಥ ಸಂದರ್ಭವಾಗಿದೆ. ಈ ದೇಶಕ್ಕೆ ತುರ್ತು ಪರಿಸ್ಥಿತಿ ಬಂದ ನಂತರ, ಯಾವ ರೀತಿ ಲೋಕನಾಯಕರಾದ ಮಾನ್ಯ ಜಯಪ್ರಕಾಶ ನಾರಾಯಣರವರ ಹೋರಾಟದಿಂದ ಮತ್ತೊಮ್ಮೆ ನಾವು ಸ್ವಾತಂತ್ರ್ಯ ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಯಿತೋ, ಅದೇ ರೀತಿ ಬಾಬಾ ರಾಮ್‌ದೇವ್ ಮತ್ತು ಅಣ್ಣಾ ಹಜಾರೆಯವರ ಈ ಹೋರಾಟ, ಅವರು ಹಾಕಿರುವಂಥ ಕೆಲವು ಪ್ರಶ್ನೆಗೆ ಇವತ್ತು ಯು.ಪಿ.ಎ. ಸರ್ಕಾರ ಒಂದು ಕ್ಷಣ ತಡ ಮಾಡದೆ ಎಲ್ಲದಕ್ಕೂ ಅನುಮತಿಯನ್ನು ಕೊಡಬೇಕಾಗಿತ್ತು. ಅದರ ಬದಲಿಗೆ ಬಲತ್ಕಾರದಿಂದ ಸ್ವಾಮಿ ಬಾಬಾ ರಾಮ್‌ದೇವ್‌ರವರು ಮಾಡುತ್ತಿರುವಂಥ ಹೋರಾಟವನ್ನು ಹತ್ತಿಕ್ಕುವಂಥ ಕೆಲಸ ಮಾಡುತ್ತಿದೆ, encounter ಮಾಡಿ ಮುಗಿಸಿ ಬಿಡಬಹುದೆಂಬ ಮಾತು ಅಂಥ ವ್ಯಕ್ತಿಯ ಬಾಯಲ್ಲಿ ಬರುತ್ತದೆಂದರೆ, ಹೇಗೆ ಇದನ್ನು ಯಾರಾದರೂ ರಾಜಕೀಯ ವ್ಯಕ್ತಿಗಳು ಮಾತನಾಡಿದ್ದರೆ ಅದಕ್ಕೆ ರಾಜಕೀಯ ಬಣ್ಣವನ್ನು ಬಳಿಯಬಹುದಾಗಿತ್ತು. ದೇಶದ ಉಳಿವಿಗಾಗಿ ಮಹಾತ್ಮರು ಯಾರು ಸ್ವಾತಂತ್ರ್ಯ

ಗಳಿಸಿ ಕೊಟ್ಟರು, ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡು ಇಡೀ ದೇಶದ ಜನರು ಈ ಹೋರಾಟಕ್ಕೆ ಬೆಂಬಲ ಕೊಡುತ್ತಿರುವಂಥ ಈ ಸಂದರ್ಭದಲ್ಲಿ, ಅಧ್ಯಕ್ಷರೆ, ನಾನು ಇಂದು ಬೆಳಿಗ್ಗೆ ಚಕ್ರವರ್ತಿ ರಾಜಗೋಪಾಲಚಾರಿಯವರ ಪುಸ್ತಕವನ್ನು ಓದುತ್ತಿದ್ದೆ, ಅವರು ಬಂಧನದಿಂದ ಹೊರಬಂದ ಮೇಲೆ ಹೇಳಿದ ಮಾತು ಏನೆಂದರೆ, "ಸ್ವಾತಂತ್ರ್ಯ ಬಂದೊಡನೆ ಚುನಾವಣೆಗಳು, ಅದರಿಂದಾಗುವ ಭ್ರಷ್ಟಾಚಾರ, ಅಧಿಕಾರ ಮತ್ತು ಸಂಪತ್ತಿನ ಬಲದಿಂದ ದಬ್ಬಾಳಿಕೆ, ಆಡಳಿತದ ಅಸಮರ್ಥತೆ ಇವೆಲ್ಲವೂ ಸೇರಿ ಜನಜೀವನವನ್ನು ನರಕ ಸದೃಶ್ಯವನ್ನಾಗಿ ಮಾಡುವ ಸಂಭವವಿದೆ, ಈ ಬಗ್ಗೆ ಜನ ಜಾಗೃತಿಯಾಗಬೇಕೆಂಬ ಮಾತನ್ನು ಹೇಳೀದ್ದರು." ಬಹುಶಃ ಇಂದಿಗೆ ಆ ಸ್ವಾತಂತ್ರ್ಯ ಬಂದ ತಕ್ಷಣ ಚಕ್ರವರ್ತಿ ರಾಜಗೋಪಾಲಚಾರಿಯವರು ಹೇಳಿದಂಥ ಮಾತು ಎಷ್ಟೊಂದು ಸೂಕ್ತವಾಗಿದೆಯೆಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಾನು ಒತ್ತಾಯ ಮಾಡುವುದೇನೆಂದರೆ, ಕೇಂದ್ರಸರ್ಕಾರದ ಯು.ಪಿ.ಎ. ನೇತೃತ್ವದ ಸರ್ಕಾರದ ಪಾಪದ ಕೊಡ ತುಂಬಿದೆ. ಇನ್ನಾದರೂ ತಾವು ಜನರನ್ನು ಹೆಚ್ಚು ಕೆಣಕದೆ, "ವಿನಾಶ ಕಾಲೇ ವಿಪರೀತ ಬುದ್ಧಿ" ಎಂಬ ಗಾದೆಯ ಮಾತು ಏನು ಇದೆ, ಅದನ್ನು ನಿಜ ಮಾಡದೇ , ಈ ದೇಶದ ಉಳಿವಿಗಾಗಿ ಅಣ್ಣಾ ಹಜಾರೆಯವರು ಮತ್ತು ಬಾಬಾ ರಾಮ್‌ದೇವ್‌ರವರು ಏನು ವಿಚಾರವನ್ನು ಮುಂದಿಟ್ಟಿದ್ದಾರೋ, ಅದಕ್ಕೆ ಮನ್ನಣೆ ಕೊಟ್ಟು, ಅದಕ್ಕೆ ಗೌರವ ಕೊಟ್ಟು ಅದನ್ನು ಕಾರ್ಯ ರೂಪಕ್ಕೆ ತರಲು ಅವಕಾಶವನ್ನು ಮಾಡಿ ಕೊಡಬೇಕು ಮತ್ತು ಬಾಬಾ ರಾಮ್‌ದೇವ್‌ರವರು ಏನು ಹೋರಾಟ ಮಾಡಿದರು, ಅವರ ಮೇಲೆ ಈ ರೀತಿ ಕೇಂದ್ರ ಸರ್ಕಾರದವರು ಅಕ್ರಮಣ ಮಾಡಿ ಅಕ್ಷಮ್ಯ ಅಪರಾಧವನ್ನು ಮಾಡಿದ್ದಾರೆ, ಅದಕ್ಕೆ ಅವರು ಕ್ಷಮೆಯಾಚಿಸಿ, ಇವರಿಬ್ಬರ ಬೇಡಿಕೆಯನ್ನು ಈಡೇರಿಸುವುದೊಂದೇ ಮಾರ್ಗ, ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಾ ಮಾನ್ಯ ಬಚ್ಚೇಗೌಡರು ತಂದಿರುವಂಥ ಈ ನಿರ್ಣಯಕ್ಕೆ ಎಲ್ಲರ ಸಹಮತವಿದೆ, ಈ ಬಗ್ಗೆ ಹೆಚ್ಚು ಚರ್ಚೆಯ ಅಗತ್ಯವಿಲ್ಲ, ತಾವು ಚರ್ಚೆಗೆ ಅವಕಾಶವನ್ನು ಮಾಡಿ ಕೊಟ್ಟಿದ್ದೀರಿ, ತಮಗೆ ಧನ್ಯವಾದಗಳನ್ನು ತಿಳಿಸುತ್ತೇನೆ. ಕೇಂದ್ರಸರ್ಕಾರಕ್ಕೆ ನಮ್ಮ ಈ ನಿರ್ಣಯದ ಉದ್ದೇಶದ ಭಾವನೆಗಳನ್ನು ತಾವು ಕಳುಹಿಸಿಕೊಡಬೇಕೆಂದು ವಿನಂತಿ ಮಾಡುತ್ತೇನೆ, ಈ ವಿಷಯ ಸಾಕಷ್ಟು ಚರ್ಚೆಯಾಗಿದೆ. ಆದ್ದರಿಂದ ಇಲ್ಲಿಗೆ ಈ ಚರ್ಚೆಯನ್ನು ಮುಗಿಸುವುದು ಒಳ್ಳೆಯದು.

ಶ್ರೀ ಪಿ.ಎಂ.ನರೇಂದ್ರಸ್ವಾಮಿ (ಮಳವಳ್ಳಿ): ಮಾನ್ಯ ಅಧ್ಯಕ್ಷರೆ, ಸಚಿವರಾಗಿರುವಂಥ ಮಾನ್ಯ ಬಚ್ಚೇಗೌಡರು ತಂದಿರುವಂಥ ಖಂಡನಾ ನಿರ್ಣಯದ ವಿಚಾರದಲ್ಲಿ, ನಾನು ಒಂದು ಮೀಸಲು ಕ್ಷೇತ್ರದ ಪ್ರತಿನಿಧಿಯಾಗಿ

ನನ್ನ ಕೆಲವೊಂದು ಅನಿಸಿಕೆಗಳನ್ನು ಈ ಸಂದರ್ಭದಲ್ಲಿ ಹೇಳುವಂಥ ಜವಾಬ್ದಾರಿಯನ್ನು ಹೊತ್ತು ಮಾತನಾಡುತ್ತಿದ್ದೇನೆ. ಅದಕ್ಕೆ ಅನುಮತಿಯನ್ನು ನೀಡಿದ್ದಕ್ಕಾಗಿ ತಮಗೆ ಆಭಾರಿಯಾಗಿದ್ದೇನೆ. ಇಂದು ರಾಷ್ಟ್ರದಲ್ಲಿ ಈ ಒಂದು ದೊಡ್ಡ ಪಿಡುಗು ಏನು ಕಾಡುತ್ತಿದೆ, ಇಡೀ ವಿಶ್ವದ ಇನ್ನಿತರ ರಾಷ್ಟ್ರಗಳಲ್ಲಿ ನಮ್ಮ ದೇಶದ ಕಪ್ಪು ಹಣ ಏನು ಸೇರಿದೆ, ಈ ವಿಚಾರವಾಗಿ ಪ್ರತಿಯೊಬ್ಬ ಶ್ರೀಸಾಮಾನ್ಯರಲ್ಲಿ ಬಂದಿರುವಂಥ ಅನುಮಾನ, ಶಂಕೆ ಮತ್ತು ಕೋಪ, ಇದೆಲ್ಲಕ್ಕೂ ಈ ಹಿಂದೆ ಅಧಿಕಾರ ವಹಿಸಿದ್ದಂಥ ಎಲ್ಲಾ ಕೇಂದ್ರ ಸರ್ಕಾರಗಳು ಜವಾಬ್ದಾರರೆಂಬುದು ನನ್ನ ಅಭಿಪ್ರಾಯ. ಇದರಲ್ಲಿ ಆ ಪಕ್ಷ ಒಳ್ಳೆಯದು, ಈ ಪಕ್ಷ ಒಳ್ಳೆಯದು ಇವರು ಒಳ್ಳೆಯವರು, ಅವರು ಕೆಟ್ಟವರೆಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ಆದರೆ ನಾವೆಲ್ಲರು ಎಲ್ಲೊ ಒಂದು ಕಡೆ ಆತ್ಮಾವಲೋಕನ ಮಾಡಿಕೊಳ್ಳಬೇಕಾದಂಥ ಪರಿಸ್ಥಿತಿ ಇವತ್ತು ಇದೆ. ನಾವು ಭ್ರಷ್ಟಾಚಾರದ ಬಗ್ಗೆ ಮಾತನಾಡಬೇಕಾದರೆ ಈ ರಾಷ್ಟ್ರದಲ್ಲಿ ಜವಾಬ್ದಾರಿಯನ್ನು ಹೊತ್ತಂಥ ಜನರು, ನಾವು ಎಷ್ಟು ಪ್ರಾಮಾಣಿಕರು ಎನ್ನುವ ಪ್ರಶ್ನೆಯನ್ನು ನಮಗೆ ನಾವೇ ಮೊದಲು ಹಾಕಿಕೊಳ್ಳುವಂಥ ದಿವಸ ಇವತ್ತು ಬಂದು ಹೋಗಿದೆ, ಭಾಷಣ ದೊಡ್ಡದಾಗಿದೆ, ವಿಚಾರ ಮಹತ್ವದ್ದಾಗಿದೆ, ಈ ದೇಶಕ್ಕೆ ಭವಿಷ್ಯದ ಪ್ರಶ್ನೆಯಾಗಿದೆ. ಇದೆಲ್ಲಕ್ಕಿಂತ ಮುಖ್ಯವಾಗಿ ವಿಶ್ವ ಸಂಸ್ಥೆಯ ಇತ್ತೀಚಿನ ಒಂದು ವರದಿ ಈ ದೇಶದಲ್ಲಿ ನಾವೆಲ್ಲರೂ ತಲೆ ತಗ್ಗಿಸುವಂಥ ಒಂದು ವಿಚಾರ ನಮ್ಮ ಕಣ್ಣೆದುರಿಗೆ ಇದೆ. ಅದರ ಬಗ್ಗೆ ಯಾರೂ ಚರ್ಚೆ ಮಾಡುತ್ತಿಲ್ಲ. ಅದರ ವಿಶೇಷವೇನೆಂದರೆ, ಭಾರತ ದೇಶ ಮನುಷ್ಯನನ್ನು ಮನುಷ್ಯನನ್ನಾಗಿ ಕಾಣದೇ ಇರುವಂಥ ದೇಶವಾಗಿ ಇವತ್ತು ಪರಿಣಮಿಸಿದೆ. ಅಂಥ ಒಂದು ದುಸ್ಸಾಹಸ ಈ ದೇಶದಲ್ಲಿ ನಡೆಯುತ್ತಿದೆ. ಈ ದೇಶದಲ್ಲಿ ಸಾಮಾಜಿಕವಾದಂಥ ಕಳಕಳಿ ಇಲ್ಲ. ಈ ಒಂದು ದಟ್ಟ ದರಿದ್ರರ ಬದುಕಿನಲ್ಲಿ ಅಟ್ಟಹಾಸವಾಗಿ ಮರೆಯುತ್ತಿರುವಂಥ ಒಂದು ವರ್ಗ, ತನ್ನದೇ ಆದಂಥ ಸಿಂಹಪಾಲನ್ನು ವೃದ್ಧಿಸಿಕೊಳ್ಳುತ್ತಾ , ಆ ಒಂದು ಶೋಷಿತ ವರ್ಗಗಳನ್ನು ಮತ್ತಷ್ಟು ಶೋಷಣೆಗೆ ಒಳಪಡಿಸುತ್ತಿರುವಂಥ ಈ ಸಮಾಜ ಈ ದೇಶದಲ್ಲಿದೆಯೆಂಬುದನ್ನು ಗುರುತಿಸಿ, ತನ್ನ ವರದಿಯಲ್ಲಿ ಹೇಳಿದೆ. ಇದರ ಜೊತೆ ಜೊತೆಯಲ್ಲಿ ಭ್ರಷ್ಟಾಚಾರದ ವಿಚಾರವಾಗಿ ಈಗ ಮಾನ್ಯ ರವಿಯವರು ಮಾತನಾಡುವಾಗ ಹೇಳಿದರು. ಅದು ಒಪ್ಪುವ ವಿಚಾರ, ನಮ್ಮ ದೇಶದ ಪ್ರತಿಯೊಂದು ಹಳ್ಳಿಯೂ ಉದ್ಧಾರವಾಗುತ್ತದೆ, ಇದನ್ನು ನಾವು ಒಪ್ಪೋಣ. ಆದರೆ ಈ ರೀತಿ ವ್ಯಾಖ್ಯಾನಗಳನ್ನು ಮಾಡುತ್ತಿರತಕ್ಕಂಥ ಎಷ್ಟು ಜನ ಈ ವಿಚಾರವಾಗಿ ಹೋರಾಟವನ್ನು ಮಾಡಿದರು? ಇಂದು ಬಾಬಾ ರಾಮ್‌ದೇವ್‌ರವರಿರಬಹುದು ಅಥವಾ ಅಣ್ಣಾ ಹಜಾರೆಯವರಿರಬಹುದು, ಅಣ್ಣಾ

ಹಜಾರೆಯವರ ಬಗ್ಗೆ ನಾವೂ ಕೂಡ ಗೌರವಯುತವಾಗಿ ಮಾತನಾಡುತ್ತೇವೆ. ಈ ದೇಶದಲ್ಲಿರತಕ್ಕಂಥ ಸಾಧು ಸಂತರು, ಪ್ರತಿಯೊಬ್ಬರೂ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತು, ಸಾಮಾಜಿಕ ಕಳಕಳಿಯನ್ನು ಹೊತ್ತು ಹೋರಾಟವನ್ನು ಮಾಡಬೇಕು. ಆದರೆ ಕಂಬಾಲಪಲ್ಲಿಯಂಥ ಹಗರಣ ನಡೆದಂಥ ಸಂದರ್ಭದಲ್ಲಿ ನಮ್ಮ ಜನ ಸುಟ್ಟು ಕರಕಲಾದರಲ್ಲ, ಆವತ್ತು ಈ ಹೋರಾಟಗಳು ಎಲ್ಲಿ ಹೋಗಿದ್ದವು? ಈ ಹೋರಾಟವನ್ನು ನಾನು ಕೂಡ ಬೆಂಬಲಿಸುತ್ತೇನೆ. ಆದರೆ ಆ ಹೋರಾಟಕ್ಕೆ ಏಕೆ ಬೆಂಬಲವಿಲ್ಲ? ಇದನ್ಯಾಕೆ ವರ್ಗೀಕರಣ ಮಾಡುತ್ತಿದ್ದೀರಿ? ನಮ್ಮ ನೋವನ್ನು ಯಾರ ಹತ್ತಿರ ಹೇಳಿಕೊಳ್ಳಬೇಕಾಗಿದೆ? ನಾವೂ ಕೂಡ ಈ ದೇಶದ ಪ್ರಜೆಗಳು. ಸಂವಿಧಾನದ ಅಡಿಯಲಿ ನಾವು ಬದುಕುತ್ತಿದ್ದೇವೆ. ಖಂಡನಾ ನಿರ್ಣಯವನ್ನು ತಂದಂಥ ಈ ಸಂದರ್ಭದಲ್ಲಿ, ಈ ವಿಚಾರವನ್ನು ನಾಡಿನ ಜನತೆಗೆ ಒತ್ತಿ ಹೇಳಲಿಕ್ಕೋಸ್ಕರವಾಗಿ ತಮ್ಮ ಮುಂದೆ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಸಂದರ್ಭದಲ್ಲಿ, ಪ್ರಜಾಪ್ರಭುತ್ವ ವಿರೋಧಿ ನೀತಿಯನ್ನು ಯಾವುದೇ ಸರ್ಕಾರ ಮಾಡಿರಲಿ, ಅದನ್ನು ನಾವೆಲ್ಲರೂ ಒಕ್ಕೊರಲಿನಿಂದ ಖಂಡಿಸಲೇಬೇಕಾಗುತ್ತದೆ. ಇದರಲ್ಲಿ ಎರಡನೇ ಮಾತಿಲ್ಲ. ಪ್ರಜಾಪ್ರಭುತ್ವ ವಿರೋಧಿ ನೀತಿಯಲ್ಲಿ ದಮನಕಾರಿಯಾದಂಥ ಅಂಶವನ್ನು ಯಾರೇ ಮಾಡಿರಲಿ, ಅದನ್ನು ನಾವು ಖಂಡಿಸಲೇಬೇಕಾಗುತ್ತದೆ. ಅದರ ಜೊತೆಜೊತೆಯಲ್ಲಿ, ನಾವೆಲ್ಲರೂ ಕೂಡ ಆತ್ಮಾವಲೋಕನ ಮಾಡಿಕೊಂಡು ಹಿಂದಿನ ಎಲ್ಲ ಸರ್ಕಾರಗಳು, ಅದರ ಜವಾಬ್ದಾರಿ ಹೊತ್ತಂಥ ಎಲ್ಲ ರಾಜಕೀಯ ಪಕ್ಷಗಳು ಆತ್ಮಾವಲೋಕನದಿಂದ ಮುಂದೆ ನಡೆದರೆ ಮಾತ್ರ ಈ ದೇಶಕ್ಕೆ ಯಾರೇ ಆಗಲಿ, ಭಾಷಣ ಮಾಡುವುದಕ್ಕೆ, ಅಧಿಕಾರ ನಡೆಸುವುದಕ್ಕೆ ಮತ್ತು ಜವಾಬ್ದಾರಿ ಹೊರುವುದಕ್ಕೆ ಅರ್ಹರು ಎನ್ನುವಂಥ ವಿಚಾರವನ್ನು ತಿಳಿಸಿ, ಈ ವಿಷಯದಲ್ಲಿ ನನ್ನ ವಿಚಾರವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಟ್ಟಂಥ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಕಾರ್ಮಿಕ ಸಚಿವರು ಮಂಡಿಸಿರುವ ಈ ಕೆಳಕಂಡ ನಿರ್ಣಯವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ದೇಶದ ಮಹಾನ್ ಪಿಡುಗಾಗಿರುವ ಭ್ರಷ್ಟಾಚಾರದ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಚಳುವಳಿ ನಡೆಸುತ್ತಿದ್ದ ಬಾಬಾ ರಾಮ್‌ದೇವ್‌ರವರನ್ನು ಜೂನ್ 4–5ರ ಮಧ್ಯರಾತ್ರಿಯಲ್ಲಿ ನಡೆಸಿದ ಪೊಲೀಸ್ ಕಾರ್ಯಚರಣೆಯ ಮೂಲಕ ಬಂಧಿಸಿರುವುದು ಹೇಯಕೃತ್ಯ. ಈ ಬಂಧನ ಒಬ್ಬ ಹೋರಾಟಗಾರನಿಗೆ ಮಾಡಿದ ಅಪಚಾರ ಮಾತ್ರವಲ್ಲ, ಬದಲಿಗೆ ಭ್ರಷ್ಟಾಚಾರದ ವಿರುದ್ಧ ಧ್ವನಿ

ಎತ್ತಿರುವ ಹಾಗೂ ತನ್ಮೂಲಕ ದೇಶದ ವ್ಯವಸ್ಥೆಗೆ ಒಂದು ಹೊಸ ಆರೋಗ್ಯಕರ ದಿಕ್ಕು ತೋರಿಸುವ ನಿಟ್ಟಿನಲ್ಲಿ ಸಿಡಿದೆದ್ದಿರುವ ಪ್ರಜಾಶಕ್ತಿಯ ಮೇಲೆ ಮಾಡಿರುವ ಒಂದು ಆಕ್ರಮಣ.

ಬ್ರಿಟಿಷರ ವಿರುದ್ಧ ಅಹಿಂಸಾ ಮಾರ್ಗದಲ್ಲಿ ಹೋರಾಟ ಮಾಡಿ ಸ್ವಾತಂತ್ರ್ಯ ತಂದುಕೊಟ್ಟ ಈ ದೇಶದಲ್ಲಿ, ಅಹಿಂಸಾ ಹೋರಾಟವನ್ನು ಮಧ್ಯರಾತ್ರಿಯಲ್ಲಿ ದಮನಗೊಳಿಸುವ ಸನ್ನಿವೇಶ ಬಂದೊದಗಿರುವುದು ಅತ್ಯಂತ ವಿಪರ್ಯಾಸ. ಈ ಸನ್ನಿವೇಶವು ನಾಗರೀಕ ಮೂಲಹಕ್ಕುಗಳನ್ನು ಅಪಹರಿಸಿದ ತುರ್ತು ಪರಿಸ್ಥಿತಿಯ ಸಂದರ್ಭವನ್ನು ನೆನಪಿಗೆ ತರುತ್ತದೆ.

ಪ್ರಜಾಸತ್ತಾತ್ಮಕ ಪ್ರತಿಭಟನೆಯನ್ನು ಪೊಲೀಸ್ ದೌರ್ಜನ್ಯದ ಮೂಲಕ ಹತ್ತಿಕ್ಕುವ ಈ ಪ್ರಯತ್ನದಲ್ಲಿ ಅಸಂಖ್ಯ ಮಹಳೆಯರು ಮತ್ತು ಮಕ್ಕಳು ಘಾಸಿಗೊಂಡಿದ್ದಾರೆ. ನಿರಪರಾಧಿ, ಮುಗ್ಧ ಜನಗಳ ಮೇಲಾದ ಈ ಪೊಲೀಸ್ ಹಲ್ಲೆಯನ್ನು ಸಹ ಈ ಸದನ ತೀವ್ರವಾಗಿ ಖಂಡಿಸುತ್ತದೆ. ಕಪ್ಪು ಹಣದ ಮಾರಕ ಶಕ್ತಿಯ ವಿರುದ್ಧ ಧ್ವನಿ ಎತ್ತಿರುವ ಪ್ರಜಾಶಕ್ತಿಯ ಮುಖವಾಣಿಯಾದ ಬಾಬಾ ರಾಮ್‌ದೇವ್‌ರವರ ವಿರುದ್ಧದ ಪೊಲೀಸ್ ಕಾರ್ಯಾಚರಣೆಯನ್ನು ಈ ಸದನವು ತೀವ್ರವಾಗಿ ಖಂಡಿಸುತ್ತದೆ ಹಾಗೂ ಈ ಕುರಿತು ಉನ್ನತ ಮಟ್ಟದ ತನಿಖೆಯಾಗಬೇಕೆಂದು ಆಗ್ರಹಿಸುತ್ತದೆ".

ನಿರ್ಣಯದ ಪರವಾಗಿರುವವರು ಹೌದು ಎಂದು ಸೂಚಿಸಬೇಕು.

ನಿರ್ಣಯದ ವಿರೋಧವಾಗಿರುವವರು ಇಲ್ಲ ಎಂದು ಸೂಚಿಸಬೇಕು.

ನಿರ್ಣಯವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ.

ನಿರ್ಣಯವು "ಹೌದು" ಎನ್ನುವವರ ಪರವಾಗಿದೆ.

ನಿರ್ಣಯವು "ಹೌದು" ಎನ್ನುವವರ ಪರವಾಗಿದೆ.

ನಿರ್ಣಯವು ಅಂಗೀಕೃತವಾಗಿದೆ.

ಗಮನ ಸೆಳೆಯುವ ಸೂಚನೆಗಳು

ಅಧ್ಯಕ್ಷರು: ಶ್ರೀ ಎ.ಬಿ. ರಮೇಶ ಬಂಡಿಸಿದ್ದೇಗೌಡರವರು.

(ಮಾನ್ಯ ಸದಸ್ಯರು ಗೈರುಹಾಜರಾಗಿದ್ದರು)

ಅಧ್ಯಕ್ಷರು: ಶ್ರೀ ಎಂ.ಟಿ.ಕೃಷ್ಣಪ್ಪನವರು

(ಮಾನ್ಯ ಸದಸ್ಯರು ಗೈರು ಹಾಜರಿದ್ದರು)